ಕರ್ನಾಟಕ ವಿಧಾನ ಸಭೆ

ಶನಿವಾರ ದಿನಾಂಕ ೨೮ನೇ ಫೆಬ್ರವರಿ ೧೯೮೭, ಫಾಲ್ಗುಣ ೯, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೩೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆಗಳು

ಅಧ್ಯಕ್ಷರು.—ಈ ಕೆಳಕಂಡ ಮಾಜಿ ಸದಸ್ಯರು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಎಸ್. ರಾಮಪ್ಪ ಅವರು ದಿನಾಂಕ ೬-೨-೧೯೮೭ ರಂದು ನಿಧನರಾದರು ಶ್ರೀಯುತರು ೧೯೬೧ ರಿಂದ ೧೯೪೯ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೨ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಕೋಮಾರಲಗಂಗಾ ಶೆಟ್ಟಿಯವರು ದಿನಾಂಕ ೧೬-೨-೧೯೮೭ ರಂದು ನಿಧನರಾದರು. ಶ್ರೀಯವರು ೧೯೪೧ ರಿಂದ ೧೯೪೫ರ ವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಸದನದಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯ ಪ್ರತಿಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿ ಕೊಡಲಾಗುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Notification No. FD 137 CSH 86 (I) & (II) dated 12th December 1986.

Exemption of Tax on the sale of 'News Print'

as required under Section 8 (2) of the Karnataka Sales Tax Act, 1957.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಬಿ ರಾಚಯ್ಯ (ಗೃಹ ಸಚಿವರು) —ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದೆ ಇರತಕ್ಕಂಥ ೧೯೫೭ನೇ ಇಸವಿಯ ತನಿಖಾ ಆಯೋಗಗಳ ಶಾಸನದ ೩ (೪)ನೇ ಕಲಮಿನ ಮೇರೆಗೆ ದಿನಾಂಕ ೬ನೇ ಮಾರ್ಚ್ ೧೯೮೫ರಲ್ಲಿ ಹೊನ್ನಾಳಿಯಲ್ಲಿ ನಡೆದ ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖಾ ಆಯೋಗದ

ವರದಿಯನ್ನು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಹೊರಡಿಸಿದ ಜ್ಞಾಪನ ಪತ್ರವನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದೆ ನಮೂದಾಗಿರತಕ್ಕಂಥ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುತ್ತೇನೆ.

a) Notification No RDP 246 VAC 1986 dated 10th February 1987 Regarding creation of Temporary posts by Departments of Government

b) Notification No RDP 374 VAC 1986, dated 30th December, 1986 The Karnataka Jilla Parishads, Taluk Panchayath Samithis, Mandal Panchayats and Nyaya Panchayats (Conduct of Election) (Fifth Amendment) Rules, 1986,

as required under Section 319 of the Karnataka Zilla Parishads, Taluk Panchayats Samithis, Mandal Panchayats and Nyaya Panchayats Act, 1983.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ. ಹೆಚ್. ಪಟೇಲರ ಹೆಸರಿನ ಮುಂದೆ ಸೂಚಿಸಿರತಕ್ಕಂಥ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುತ್ತೇನೆ.

a) Report on the Accounts of the Karnataka Electricity Board for the year 1983-84.

b) Annual Report of the Karnataka Electricity Board for the year 1985-86.

as required under Sections 69 (5) and 75 (1) of the Electricity (Supply) Act, 1948.

c) 20th Annual Report and Accounts of the Mysore Acetate and Chemicals company Limited for the year 1983. as required under Section 619 (A) of the Companies Act, 1956.

ಅಧ್ಯಕ್ಷರು —ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಆರ್. ಎಲ್. ಜಾಲಪ್ಪನವರ ಹೆಸರಿನ ಮುಂದೆ ಇರತಕ್ಕಂಥ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುತ್ತೇನೆ.

Notification No. CMW 112 CLM 85 dated 9th February, 1987. The Karnataka Co-operative Societies (Amendment) Rules, 1987.

as required under Section 130 of the Karnataka Co-operative Societies Act, 1959.

ಅಧ್ಯಕ್ಷರು —ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ಶ್ರೀ ಜೆ. ಹೆಚ್. ದೇಶ್‌ಮುಖ್ (ಗಣಿ ಭೂವಿಜ್ಞಾನ ಮತ್ತು ಅರಣ್ಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರೆ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ)ನೇ ಕಲಮಿನ ಮೇರೆಗೆ ಕರ್ನಾಟಕ ನೆಡುತೋಪು ನಿಗಮದವರ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ ಮಂತ್ರಿಗಳು).—Sir, I lay the Fourth Annual Report of the Karnataka Milk Products Ltd. for the year 83-84

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

ADJOURNMENT MOTION

Reg. Police Firing at Pavagada

SRI K. H. PATIL.—Sir, I have moved a privilege motion . ...

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರು ಮತ್ತು ಇತರ ಸದಸ್ಯರು ಪಾವಗಡದಲ್ಲಿ ನಡೆದ ಘಟನೆ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ನಿಲುವಳಿ ಸೂಚನೆಯಾಗಿ ಅಳವಡಿಸಿಕೊಳ್ಳದೆ ನಿಯಮ ೬೮ರ ಅಡಿಯಲ್ಲಿ ಚರ್ಚೆಗೆ ಅವಕಾಶಮಾಡಿಕೊಟ್ಟಿದ್ದೇನೆ. ಈಗ ಚರ್ಚೆಯನ್ನು ಪ್ರಾರಂಭಿಸಬಹುದು.

ಶ್ರೀ ಆರ್. ವೆಂಕಟರಾವಯ್ಯ.— ಮಾನ್ಯ ಅಧ್ಯಕ್ಷರೆ, ನಾನು.....

ಅಧ್ಯಕ್ಷರು.— ಈಗ ಶ್ರೀಮತಿ ನಾಗರತ್ನಮ್ಮನವರಂ ಶುರು ಮಾಡಲಿ ನಿಯಮ ೬೮ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಈಗ ತಾವು ಪ್ರಾರಂಭ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಕೇಳಿಕೊಂಡಿದ್ದೇವೆ ತದನಂತರ ಅದನ್ನು ಕನ್ವರ್ಟ್ ಮಾಡಬೇಕಾದರೆ ಕಾರಣವೇನು ?

ಅಧ್ಯಕ್ಷರು.—ಎರಡು ತಾಸು ಅವಕಾಶ ಕೊಡುತ್ತೇನೆ, ಮಾತಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು, ನಾವು ಹೇಳುವುದನ್ನು ಸ್ವಲ್ಪ ಕೇಳಬೇಕು.

ಅಧ್ಯಕ್ಷರು.—ನಾನು ಎರಡು ತಾಸು ತಪಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ನಮ್ಮನ್ನು ಕರೆಯಿಸಿದಾಗ ಕನ್‌ವರ್ಟ್ ಮಾಡುತ್ತೇನೆಂದು ಹೇಳಲಿಲ್ಲ. ನಿಲುವಳಿ ಸೂಚನೆಯಾಗಿಯೇ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು.—ನಿಯಮ ೬೮ರ ಪ್ರಕಾರ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮಗಳನ್ನು ಸಂಖ್ಯೆಗೆ ತೆಗೆದುಕೊಂಡು ಹೇಳಿದ್ದೆ ಒಂದು ಇಲ್ಲಿ ಮಾಡುವುದು ಇನ್ನೊಂದು.

ಅಧ್ಯಕ್ಷರು.—೧೨ ಗಂಟೆಯವರೆಗೆ ಚರ್ಚೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್ —ನಿಯಮಗಳ ಪ್ರಕಾರ ನೀವು ಹೇಳುವುದನ್ನು ನಾವು ಕೇಳುತ್ತೇವೆ. ನೀವು ನಮ್ಮ ರಕ್ಷಣೆಗೆ ಬರಬೇಕು. ನಿಯಮಾವಳಿ ೬೮ರ ಪ್ರಕಾರ ನಿಲುವಳಿ ಸೂಚನೆ ಯಾಗಬೇಕಾದರೆ.—

> "Subject to the provisions of these rules, a motion for an adjournment of the business of the House for the purposes of discussing a definite matter of urgent public importance may be made with the consent of the Speaker".

According to Rule 60 we have given notice to the Speaker, and the Secretary concerned.

Rule 62 says,

> "No motion which seeks to raise discussion on a matter pending before any statutory triblunal or statutory